# ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಆವರಣ, ತಳಕಲ್-583231, ಕೊಪ್ಪಳ ಜಿಲ್ಲೆ, ಕರ್ನಾಟಕ

E: re.koppaluniversity@gmail.com | W: www.koppaluniversity.ac.in | M: +91 94486 87862


ಸಂಖ್ಯೆ: ಕೊ.ವಿ.ವಿ/ಸ್ನಾತಕ/ಪರೀಕ್ಷಾ.ಶುಲ್ಕ/2023–24/17

ದಿನಾಂಕ: 06.02.2024

## ಪರಿಷ್ಕೃತ ಅಧಿಸೂಚನೆ

**ವಿಷಯ:** ಫೆಬ್ರುವರಿ/ಮಾರ್ಚ–2024ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 1ನೇ ಸೆಮಿಸ್ಟರ್(NEP) (Regular) ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06.02.2024.

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಫೆಬ್ರುವರಿ/ಮಾರ್ಚ–2024ರ ತಿಂಗಳಿನಲ್ಲಿ ಜರುಗಲಿರುವ ಸ್ನಾತಕ ಪದವಿಯ 1ನೇ ಸೆಮಿಸ್ಟರ್ (NEP) (Regular) ವಿದ್ಯಾರ್ಥಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ, ಶುಲ್ಕ ಪಾವತಿಸುವ ದಿನಾಂಕಗಳು ಈ ಕೆಳಗಿನಂತಿವೆ.

**ಅರ್ಜಿ (ಶುಲ್ಕ ಪಾವತಿಸಲು) ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳ ಕುರಿತು**

| ಕ್ರ.ಸಂ | ವಿವರ | ದಿನಾಂಕಗಳು |
|---|---|---|
| 01 | ದಂಡ ಶುಲ್ಕ ರಹಿತ | 05.02.2024 ರಿಂದ 12.02.2024 ವರೆಗೆ |
| 02 | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 200/– ರಂತೆ | 13.02.2024 ರಿಂದ 17.02.2024 ವರೆಗೆ |
| 03 | ದಂಡ ಶುಲ್ಕ ಪ್ರತಿ ದಿನಕ್ಕೆ ರೂ. 500/– ರಂತೆ | 18.02.2024 ರಿಂದ 23.02.2024 ವರೆಗೆ |

**ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಶುಲ್ಕದ ವಿವರ**

| ಕ್ರ.ಸಂ | ವಿವರಣೆ | ಬಿ.ಎ/ಬಿ.ಕಾಂ | ಬಿ.ಎಸ್ಸಿ | ಬಿಬಿಎ/ಬಿಸಿಎ |
|---|---|---|---|---|
| 01. | ಪ್ರತಿ ಸೆಮಿಸ್ಟರ್ ಪರೀಕ್ಷೆಗಳಿಗೆ | ರೂ. 1200=00 | ರೂ. 1500=00 | ರೂ. 1300=00 |
| 02. | ಅಂಕಪಟ್ಟಿ ಶುಲ್ಕ ಪ್ರತಿ ಸೆಮಿಸ್ಟರ್‌ಗೆ | ರೂ. 200=00 | ರೂ. 200=00 | ರೂ. 200=00 |
| 03. | ಒಟ್ಟು ಶುಲ್ಕ | ರೂ. 1400=00 | ರೂ. 1700=00 | ರೂ. 1500=00 |

ಈ ಪರೀಕ್ಷೆಗಳಿಗೆ ನಿಯಮಾನುಸಾರ ಅರ್ಹರಾದ ವಿದ್ಯಾರ್ಥಿಗಳು ಅರ್ಜಿಯನ್ನು ಭರಿಸಲು Online ಮೂಲಕ ಮಾತ್ರ ಅವಕಾಶವಿರುತ್ತದೆ. ವಿಶ್ವವಿದ್ಯಾಲಯವು ನೇರವಾಗಿ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ.

**ಪ್ರಾಂಶುಪಾಲರು ಹಾಗೂ ವಿದ್ಯಾರ್ಥಿಗಳಿಗೆ ಸೂಚನೆ:**

1. ವಿದ್ಯಾರ್ಥಿಗಳು UUCMS (Online) ಮುಖಾಂತರ ಅರ್ಜಿ ಭರಿಸಿ, ಶುಲ್ಕ ಸಂದಾಯಿಸಿದ ನಂತರ ಪ್ರತಿಯನ್ನು ತಕ್ಷಣ ಮಹಾವಿದ್ಯಾಲಯಗಳಿಗೆ ಸಲ್ಲಿಸಬೇಕು.
2. SC/ST ಹಾಗೂ OBC ಅಭ್ಯರ್ಥಿಗಳು ಹಾಗೂ ಸರ್ಕಾರಿ ಆದೇಶಗಳನ್ವಯ ವಾರ್ಷಿಕ ಆದಾಯದ ಮಿತಿಯೊಳಗೆ ಬರುವ ವಿದ್ಯಾರ್ಥಿಗಳು ನೇರವಾಗಿ ವಿದ್ಯಾರ್ಥಿ ವೇತನ ಪಡೆಯುವುದರಿಂದ ಪೂರ್ಣ ಶುಲ್ಕವನ್ನು ಪಾವತಿಸತಕ್ಕದ್ದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯು ತಮ್ಮ ನೊಂದಣಿ ಸಂಖ್ಯೆಯನ್ನು ಬಿಟ್ಟು ಬೇರೆ ನೋಂದಣಿ ಸಂಖ್ಯೆ ಅಥವಾ ಬೇರೆ ವಿಷಯಗಳನ್ನು ನಮೂದಿಸಿದರೆ ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳನ್ನು ಯಾವದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ. ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

06-02-24

ಕುಲಸಚಿವರು(ಮೌಲ್ಯಮಾಪನ)
ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

ಗೆ,

ಸಂಬಂಧಿಸಿದ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ. ರವರಿಗೆ ಮಾಹಿತಿಗಾಗಿ.
4. ನಿರ್ದೇಶಕರು, UUCMS ವಿಭಾಗ, ಬೆಂಗಳೂರು. ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ.